

ಆಸಾಮಿಯಲ್ಲ ಹಣ ತೆಗೆಯಿರಿ' ಎಂದು ಅರ್ಭಟಿಸಿದ.

ನಾನು ಅವನ ಜೊತೆ ಸಂದಾನದ ಮಾತುಕಥೆಗೆ ಕೂತೆ. 'ಅರಣ್ಯ ಕಾಯ್ದೆ ಪ್ರಕಾರ ನೀವು ಡ್ರೋಣ್ ತಂದಿರುವುದು ದೊಡ್ಡ ಅಪರಾಧ. ಅವರಿಬ್ಬರು ಸಿಗರೇಟು ಸೇದಲು ಜೇಬಲ್ಲಿಟ್ಟಿರುವ ಬೆಂಕಿಪಟ್ಣ ಒಂದೇ ಸಾಕು ನನಗೆ. ಕಾಡಿಗೆ ಬೆಂಕಿ ಹಚ್ಚಲು ಬಂದಿದ್ದರು ಎಂದು ಒಂದು ವರದಿ ತಯಾರಿಸಿ ನಿಮ್ಮ ಕಥೆ ಮಗಿಸುತ್ತೇನೆ' ಎಂದ.

ಅವನ ಸಿಟ್ಟು ಇಳಿಯುವತನಕವೂ ಅವನು ಹೇಳಿದ್ದನ್ನು ಸಹನೆಯಿಂದ ಕೇಳಿದೆ. ಗದರಿಸಿ ಬೈದದ್ದನ್ನು ಪ್ರಸಾದವೆಂದು ಸ್ವೀಕರಿಸುತ್ತಾ ಕುಳಿತೆ. ಆತ ಒಬ್ಬನೇ ಮಾತಾಡಿ, ಮಾತಾಡಿ ಸುಸ್ತಾದ. ನಮ್ಮಿಂದ ಭಾರಿ ಹಣ ಲಂಚವಾಗಿ ಸ್ವೀಕರಿಸುವ ಅವನ ಆಸೆ ಬತ್ತಿ ಹೋದಂತೆ ಕಂಡಿತು. ಐದು ಲಕ್ಷದಿಂದ ಕೆಳಗಿಳಿದು ಬರುತ್ತಾ ಕೊನೆಗೆ ಇಪ್ಪತ್ತೈದು ಸಾವಿರದ ಸರ್ಕಾರಿ ಫೈನಿಗೆ ಬಂದು ನಿಂತ. ನನ್ನಲ್ಲಿ ಅಷ್ಟು ಹಣವಿಲ್ಲ ಎಂದಾಗ ಎ.ಟಿ.ಎಂ ಗೆ ಹೋಗಿ ತಾ ಎಂದು ತನ್ನ ಸಿಬ್ಬಂದಿಯನ್ನು ಕರೆಸಿ ಜೀಪಿನಲ್ಲಿ ನನ್ನ ಕಳಿಸಿ ಕೊಟ್ಟ. ಮತ್ತೊಂದು ಗಂಟೆಯ ಕೆಟ್ಟ ಪಯಣ ಮಾಡಿ ದುಡ್ಡು ಹೊಂದಿಸಿ ತಂದು ಕೊಟ್ಟೆ.

ಇತ್ತ ನನ್ನ ಗೆಳೆಯರಿಬ್ಬರು ಆರಾಮಾಗಿ ಟೀ ತರಿಸಿ ಕುಡಿಯುತ್ತಾ ಸಿಗರೇಟು ಎಳೆಯುತ್ತಾ ತಮಾಷೆ ಮಾಡುತ್ತಾ ನಿಂತಿದ್ದರು. 'ನೀನು ಹೆದರಿ ದಂಡ ಕಟ್ಟಬಾರದಾಗಿತ್ತು ಕಣೋ. ನಮ್ಮನ್ನು ಆತ ಎಷ್ಟು ದಿನಾಂತ ಇಟ್ಕೋತ್ತಿದ್ದ. ಬೇಜಾರಾಗಿ ಅವನೇ ಬಿಟ್ಟು ಕಳಿಸ್ತಾ ಇದ್ದ' ಎಂದು ಲೋಕೇಶ್ ಮೊಸಳೆ ವೇದಾಂತ ಹೇಳತೊಡಗಿದರು. ನನಗೆ ತಲೆ ಗಿರಗಿರ ಎನ್ನುತ್ತಿತ್ತು. ಈ ಫೋಟೊಗ್ರಫಿ, ಈ ಜಗಳಗಂಟ ಗೆಳೆಯರ ಸವಾಸ ಇನ್ನು ಬ್ಯಾಡಪ್ಪ ಎಂದು ಮನಸ್ಸು ಹೇಳುತ್ತಿತ್ತು. ಮೈಸೂರು ಸಿಗುವ ತನಕವೂ ಮೌನವಾಗಿ ಗಾಡಿ ಓಡಿಸತೊಡಗಿದೆ.

●